ದಿನಾಂಕಃ **28.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲು : **10** ನೇ ಪ್ರತಿವಾದಿಯ ಪರ ವಕೀಲರಿಂದಃ

05. ಈ ದಾವೆಯ 9 ನೇ ಪ್ರತಿವಾದಿ ಬೆಂಡಿಗೇರಿ ಫಕ್ಕೀರವ್ವ ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ. ಸದರಿ 9 ನೇ ಪ್ರತಿವಾದಿಯು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯ ಹಕ್ಕು ಬದಲಾವಣೆ ಮಾಡಿಕೊಂಡಿದ್ದ ಕಾರಣಕ್ಕೆ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ಈ ದಾವಾ ಐಟಂ ನಂ. 4 ರ ಒಟ್ಟು ವಿಸ್ತೀರ್ಣ 13 ಎಕರೆ 68 ಸೆಂಟ್ಸ್ ಇದೆ ಎಂದರೆ ಸರಿ. ಸದರಿ 13 ಎಕರೆ 68 ಸೆಂಟ್ಸ್ ವಿಸ್ತೀರ್ಣವು ಎಂ.ಆರ್.ಎಚ್.-84 ರಂತೆ 2011-2012 ನೇ ಇಸವಿಯಲ್ಲೇ 1 ರಿಂದ 3 ನೇ ಪ್ರತಿವಾದಿ ಹಾಗೂ 4 ನೇ ಪ್ರತಿವಾದಿಯ ನಡುವೆ ಪಾಲುವಿಭಾಗವಾಗಿದೆ ಎಂದರೆ ಸುಳ್ಳು, ಸೃಷ್ಟಿ ಮಾಡಿಕೊಂಡಿದ್ದಾರೆ. ಸದರಿ ಪಾಲುವಿಭಾಗದಲ್ಲಿ 1 ರಿಂದ 3 ನೇ ಪ್ರತಿವಾದಿಗಳಿಗೆ 6 ಎಕರೆ 84 ಸೆಂಟ್ಸ್ ಹಿಸ್ಸೆಯಾಗಿ ಬಂದಿದೆ ಎಂದರೆ ಸೃಷ್ಟಿ ಮಾಡಿಕೊಂಡಿದ್ದಾರೆ. ಅದೇ ರೀತಿ ಸದರಿ ಪಾಲುವಿಭಾಗದಲ್ಲಿ 4 ನೇ ಪ್ರತಿವಾದಿಯ ಹಿಸ್ಸೆಗೆ ಕೂಡಾ 6 ಎಕರೆ 84 ಸೆಂಟ್ಸ್ ಬಂದಿದೆ ಎಂದರೆ ಸೃಷ್ಟಿ ಮಾಡಿಕೊಂಡಿದ್ದಾರೆ. ಸದರಿ ಪಾಲುವಿಭಾಗದ ಪ್ರಕಾರ 1 ರಿಂದ 3 ಮತ್ತು 4 ನೇ ಪ್ರತಿವಾದಿಗಳ ಹೆಸರುಗಳಿಗೆ ಪಹಣಿ ಮತ್ತು ಖಾತೆ ಬದಲಾವಣೆ ಆದವು ಎಂದರೆ ಸರಿ. ಖಾತೆ ಬದಲಾವಣೆ ಮಾಡಿಕೊಂಡ ನಂತರ ಪಹಣಿ ಪ್ರಕಾರ ಅವರವರ ಹಿಸ್ಸೆಯಲ್ಲಿ ಅವರವರು ಸ್ವಾಧೀನ ಹೊಂದಿದರು ಎಂದರೆ ಅವರು ಸ್ವಾಧೀನಕ್ಕೆ ಬಂದ ಬಗ್ಗೆ ಗೊತ್ತಿಲ್ಲ ಆದರೆ ನಾವೇ ಸಾಗುವಳಿ ಮಾಡುತ್ತಿದ್ದೆವು. ಐಟಂ ನಂ. 4 ರ ಆಸ್ತಿಯಲ್ಲಿ ನಾನು ಯಾವತ್ತೂ ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ಅವರ ಹಿಸ್ಸೆಗೆ ಬಂದಿದ್ದ 6 ಎಕರೆ 84 ಸೆಂಟ್ಸ್ ಆಸ್ತಿಯನ್ನು ದಿನಾಂಕ 19.09.2016 ರಂದು ನೊಂದಾಯಿತ ಪಾಲುವಿಭಾಗ ಪತ್ರದ ಪ್ರಕಾರ ವಿಭಾಗ ಮಾಡಿಕೊಂಡರು ಎಂದರೆ ಸದರಿ ಪಾಲುವಿಭಾಗ ಪತ್ರದ ಬಗ್ಗೆ ನಮ್ಮ ಗಮನಕ್ಕೆ ಬಂದಿಲ್ಲ. ನನಗೆ 1 ರಿಂದ 3 ನೇ ಪ್ರತಿವಾದಿಗಳ ಸ್ವಾಧೀನದ ಬಗ್ಗೆ ಮತ್ತು ನೊಂದಾಯಿತ ಪಾಲುವಿಭಾಗ ಪತ್ರದ ಬಗ್ಗೆ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕ 19.09.2016 ರ ನೊಂದಾಯಿತ ಪಾಲುವಿಭಾಗದಲ್ಲಿ 3 ನೇ ಪ್ರತಿವಾದಿ ಅಣ್ಣಕ್ಕನಿಗೆ 2 ಎಕರೆ ಹಿಸ್ಸೆಯಾಗಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ, ನಾನು ಕೇಳುತ್ತೇನೆ ಹೇಗೆ ಭಾಗ ಮಾಡಿಕೊಂಡರು?

06. ಈ ದಾವೆಯಲ್ಲಿ 10 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಏನು ಬರೆಸಿದ್ದಾರೆಂದು ನನ್ನ ವಕೀಲರ ಮೂಲಕ ತಿಳಿದುಕೊಂಡಿದ್ದುಂಟೇ? ಎಂದರೆ ತಿಳಿದುಕೊಂಡಿಲ್ಲ. ದಿನಾಂಕ 09.07.2020 ರಂದು 3 ನೇ ಪ್ರತಿವಾದಿ ಅಣ್ಣಕ್ಕನು ಆಕೆಯ ಹಿಸ್ಸೆಗೆ ಬಂದ 2 ಎಕರೆಯನ್ನು 10 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ , ನಾನು ಹೇಳುತ್ತೇನೆ ಕ್ರಯ ಪತ್ರ ಸೃಷ್ಟಿ ಮಾಡಿದ್ದಾರೆ. 3 ನೇ ಪ್ರತಿವಾದಿ ಕಾನೂನುಬದ್ಧವಾಗಿ ತನ್ನ ಹಿಸ್ಸೆಗೆ ಬಂದ ಆಸ್ತಿಯನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. 10 ನೇ ಪ್ರತಿವಾದಿ

ತಾನು ಖರೀದಿ ಮಾಡಿದ ದಿನಾಂಕದಿಂದಲೂ ಸ್ವಾಧೀನ ಹೊಂದಿದ್ದಾರೆ ಎಂದರೆ ಇಲ್ಲ, ಅದು ಕುಟುಂಬದ ಆಸ್ತಿಯಾಗಿದ್ದು ಈಗಲೂ ನಾವೇ ಸ್ವಾಧೀನ ಹೊಂದಿದ್ದೇವೆ. 10 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಬದಲಾವಣೆ ಮತ್ತು ಪಹಣಿ ಮಾಡಿಸಿಕೊಂಡು ಅವರೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ಹಾಗೂ 4 ನೇ ಪ್ರತಿವಾದಿ ಎಂ.ಆರ್.ಎಚ್-84/2011-12 ರಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದನ್ನು ನಾನು ಎ.ಸಿ. ಅಥವಾ ಡಿ.ಸಿ. ಯವರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದುಂಟೇ? ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ, ಅವರು ಸೃಷ್ಟಿ ಮಾಡಿಕೊಂಡಿದ್ದಾರೆ. ಐಟಂ ನಂ. 4 ರಲ್ಲಿ ಪಾಲುವಿಭಾಗ ಕೇಳಲು ನನಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ನಾನು ಇವೇ ಆಸ್ತಿಗಳ ಬಗ್ಗೆ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಓ.ಎಸ್. ನಂ.95/2017 ನ್ನು ಸಲ್ಲಿಸಿದ್ದೆ ಎಂದರೆ ಆ ನ್ಯಾಯಾಲಯದ ಅನುಮತಿ ಪಡೆದು ಈ ದಾವೆ ಹಾಕಿದ್ದೇನೆ. ಸದರಿ ಓ.ಎಸ್. ನಂ.95/2017 ರಂತೆ ನಾನು ಸಲ್ಲಿಸಿದ್ದ ದಾವೆ ನಾನು ವಿಚಾರಣೆಗೆ ಹಾಜರಾಗದೇ ಇದ್ದಿದ್ದರಿಂದ ವಜಾ ಆಗಿತ್ತು ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯು ಖಾತೆ ಬದಲಾವಣೆ ಮಾಡಿಸಿಕೊಂಡಿದ್ದರಿಂದ ಉಳಿದ ಪ್ರತಿವಾದಿಗಳನ್ನು ಸೇರಿಸಿ ಈ ದಾವೆ ಹಾಕಿದ್ದೇನೆ ಎಂದರೆ ನಮ್ಮ ಕುಟುಂಬದ ಆಸ್ತಿ ನಮಗೇ ಸೇರಬೇಕೆಂದು ದಾವೆ ಹಾಕಿದ್ದೇನೆ. 10 ನೇ ಪ್ರತಿವಾದಿಯು ಐಟಂ ನಂ. 4 ರಲ್ಲಿ 2 ಎಕರೆ ಖರೀದಿ ಮಾಡುವ ಮುಂಚೆ 3 ನೇ ಪ್ರತಿವಾದಿಗೆ ಪಾಲುವಿಭಾಗ ಪತ್ರದ ಮೂಲಕ ಬಂದ ಬಗ್ಗೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸದುದ್ದೇಶದಿಂದ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ, ನಾನು ಹೇಳುತ್ತೇನೆ ಸೃಷ್ಟಿ ಮಾಡಿಕೊಂಡಿದ್ದಾರೆ. ದಿನಾಂಕಃ 09.07.2020 ರ ಕ್ರಯ ಪತ್ರದ ಪ್ರಕಾರ ಸದರಿ 2 ಎಕರೆಯ ಮಾಲೀಕರು ಮತ್ತು ಸ್ವಾಧೀನದಾರರು 10 ನೇ ಪ್ರತಿವಾದಿಯೇ ಇರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹೂವಿನ ಹಡಗಲಿ.**